ಓಎಸ್ ನಂಃ **19/2017**
ಡಿಡಬ್ಲೂಃ **1**

**<u>ಸಾಕ್ಷಿಗೆ ದಿನಾಂಕ 08-01-2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

<u>ಪಾಟೀ ಸವಾಲುಃ  ವಾದಿ ಪರ ಶ್ರೀಮತಿ ಎಮ್.ವಿ.ಎಲ್.  ವಕೀಲರಿಂದ</u>

ನಾನು ವಾಡಿಯ ರೈಲ್ವೇ ಚಾಳಿಯಲ್ಲಿ ಮೊದಲು ಇದ್ದೆ, ನಂತರ ದಾವಾ ಆಸ್ತಿಯನ್ನು ಖರೀದಿ ಮಾಡಿ ಅದರಲ್ಲಿ ಮನೆ ಕಟ್ಟಿಕೊಂಡು ಸದರಿ ಮನೆಯಲ್ಲಿ ಕಳೆದ 21 ವರ್ಷಗಳಿಂದ ವಾಸವಾಗಿದ್ದೇನೆ.  ನಾನು ಜಾನ್ ತಂದೆ ಭೀಮ್ ಶಾ ಇವರನ್ನು ನೋಡಿರುತ್ತೇನೆ.  ಅವರು ಯಾವಾಗ ತೀರಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ.  ನಾನು ಜಾನ್ ತಂದೆ ಭೀಮ್ ಶಾ ಇವರ ಹೆಂಡತಿಯಾದ ಕಮಾಲಾ ರವರನ್ನು ನೋಡಿಲ್ಲ.  ಜಾನ್ ತಂದೆ ಭೀಮ್ ಶಾ ಇವರಿಗೆ ಯಾವುದೇ ಮಕ್ಕಳಿರಲಿಲ್ಲ.  ಜಾನ್ ತಂದೆ ಭೀಮ್ ಶಾ ಇವರು ಸರ್ವೆ ನಂಬರ್ 47/3 ನೇದ್ದನ್ನು NA ಮಾಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.  ಜಾನ್ ತಂದೆ ಭೀಮ್ ಶಾ ಇವರ ಹೆಸರಿನಲ್ಲಿ ಸರ್ವೆ ನಂಬರ್ 47/1 ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ.  ನಾನು ದಾವಾ ಆಸ್ತಿಯನ್ನು ಪ್ರಕಾಶ್ ತಂದೆ ಜಾನ್ ಭೀಮ್ ಶಾ ಅವರಿಂದ ಖರೀದಿ ಮಾಡಿರುತ್ತೇನೆ. ಜಾನ್ ತಂದೆ ಭೀಮ್ ಶಾ ಅವರಿಗೆ ಮಕ್ಕಳಿರಲಿಲ್ಲ ಎಂದರೆ ಸಾಕ್ಷಿ ಪ್ರಕಾಶ್ ಇವರು ಜಾನ್ ತಂದೆ ಭೀಮ್ ಶಾ ಇವರ ವಾರಸುದಾರ ಆಗಿದ್ದ ಎಂದು ನುಡಿಯುತ್ತಾರೆ.

ಜಾನ್ ತಂದೆ ಭೀಮ್ ಶಾ ಇವರು ಜೀವಂತ ಇದ್ದಾಗ ದಾವಾ ಆಸ್ತಿಯನ್ನು ವಾದಿಗೆ 1984ರಲ್ಲಿ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ.  ನಾನು 1ನೇ ಪ್ರತಿವಾದಿಯಿಂದ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆಗಳನ್ನು ಮತ್ತು ಕಂದಾಯ ದಾಖಲೆಗಳನ್ನು ನೋಡಿ ಖರೀದಿ ಮಾಡಿರುತ್ತೇನೆ.  ನಾನು ಆಸ್ತಿಯು 1ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಪ್ರಕಾಶ್ ಇವರಿಗೆ ಸರ್ವೆ ನಂಬರ್ 47/3 ನೇದರ ಮೇಲೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.  ಪ್ರಕಾಶ್ ಮತ್ತು ಜಾನ್ ತಂದೆ ಭೀಮ್ ಶಾ ಇವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಜಾನ್ ತಂದೆ ಭೀಮ್ ಶಾ ಇವರು ಪ್ರಕಾಶ್ ಇವರ ಹೆಸರಿನಲ್ಲಿ ಒಂದು ಮೃತ್ಯು ಪತ್ರವನ್ನು ಬರೆದುಕೊಟ್ಟಿದ್ದಾರೆಂದು ನುಡಿಯುತ್ತಾರೆ.  ನಾನು ಮೃತ್ಯು ಪತ್ರದ ಮೂಲ

ಪ್ರತಿಯನ್ನು ಹಾಜರುಪಡಿಸಿಲ್ಲ. ಈಗ ಪ್ರಕಾಶ್ ಎಲ್ಲಿದ್ದಾನೆಂದು ನನಗೆ ಗೊತ್ತಿಲ್ಲ. ಪ್ರಕಾಶ್ ಇವರ ಸಹೋದರ ಸುಂದರ್ ರಾಜ್ ವಾಡಿಯಲ್ಲಿಯೇ ಇರುತ್ತಾನೆ. ಪ್ರಕಾಶ್ ಈತನಿಗೆ ನಿಪಿ-6 ರಂತೆ ಯಾವುದೇ ಆಸ್ತಿಯನ್ನು ನನಗೆ ಮಾರಾಟ ಮಾಡಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಂತೆ ಪ್ರಕಾಶ್ ಈತನಿಗೆ 3ನೇ ಪ್ರತಿವಾದಿಗೆ ಯಾವುದೇ ಆಸ್ತಿಯನ್ನು ಮಾರಾಟ ಮಾಡಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ಜಾನ್ ತಂದೆ ಭೀಮ್ ಶಾ ಈತ 1984ರಲ್ಲಿ ನಿಪಿ-1ರಂತೆ ವಾದಿಗೆ ಮತ್ತು ನಿಪಿ-5ರಂತೆ ಶಿವಾಜಿ ತಂದೆ ಪ್ರಭು ಸಿಂಗ್ ಇವರಿಗೆ ಮತ್ತು ನಿಪಿ-9ರ ಪ್ರಕಾರ ಧರಮ್ ಸಿಂಗ್ ತಂದೆ ರಾಮ್ ಚಂದ್ರ ಇವರಿಗೆ ಬೇರೆ ಬೇರೆ ಪ್ಲಾಟ್ ಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಜಾನ್ ತಂದೆ ಭೀಮ್ ಶಾ ಇವರು ತಾವು ಜೀವಂತ ಇದ್ದಾಗಲೇ ಸರ್ವೆ ನಂಬರ್ 47/3ರಲ್ಲಿ ಇರುವ ಎಲ್ಲಾ ಪ್ಲಾಟ್ ಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಆಸ್ತಿಯ ಪೂರ್ವಕ್ಕೆ ರಸ್ತೆ ಇದ್ದು, ಪಶ್ಚಿಮಕ್ಕೆ ಸುರೇಶ್ ಬಂಡ್ ಗರ್ ಇವರ ಮನೆ ಇದ್ದು, ಸದರಿ ಮನೆಯು ನಾನು ಆಸ್ತಿ ಖರೀದಿ ಮಾಡುವ ಮೊದಲಿನಿಂದಲೇ ಇತ್ತು. ಸುರೇಶ್ ಇವರ ಪ್ಲಾಟ್ 50x50ಫೀಟ್ ಇದೆ ಎಂದರೆ ಸರಿ. ಉತ್ತರಕ್ಕೆ 5 ಫೀಟ್ ರಸ್ತೆ ಇದ್ದು ಅದರ ನಂತರ ಕುರ್ಮಯ್ಯ ಅವರ ಮನೆ ಇದ್ದು ಕುರ್ಮಯ್ಯ ಅವರು ಈಗ ತಮ್ಮ ಜಾಗವನ್ನು ತಾಂಡಾದ ಚಂದ್ರು ಅವರಿಗೆ ಮಾರಾಟ ಮಾಡಿದ್ದಾರೆ. ಕುರ್ಮಯ್ಯ ಅವರ ಜಮೀನು ಸಹ 50x50 ಫೀಟ್ ಇದೆ ಎಂದರೆ ಸರಿ. ದಕ್ಷಿಣಕ್ಕೆ 3ನೇ ಪ್ರತಿವಾದಿಯವರ ಜಾಗ ಇದೆ. ನೀವು ಮತ್ತು 3ನೇ ಪ್ರತಿವಾದಿ 1ನೇ ಪ್ರತಿವಾದಿಗೆ ಯಾವುದೇ ಅಧಿಕಾರ ಇಲ್ಲ ಎಂದು ಗೊತ್ತಿದ್ದರೂ ಸಹ ಆಸ್ತಿಯನ್ನು ಖರೀದಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಜಾನ್ ತಂದೆ ಭೀಮ್ ಶಾ ಇವರು ಪ್ರಕಾಶ್ ಇವರಿಗೆ ದಿಃ 11.03.1981 ರಂದು ಯಾವುದೇ ಮೃತ್ಯು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಹನುಮಾನ್ ಸಿಂಗ್ ತಂದೆ ಸೋಮ್ಲು ಪವಾರ್ ಇವರ 50x50 ಫೀಟ್ ಪ್ಲಾಟ್ ಸರ್ವೆ ನಂಬರ್ 47/3 ನಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಪ್ಲಾಟ್ ನಮ್ಮ ಪ್ಲಾಟ್ ನಿಂದ ದೂರದಲ್ಲಿದೆ ಎಂದು ನುಡಿಯುತ್ತಾರೆ. ಹನುಮಾನ್ ಸಿಂಗ್ ತಂದೆ ಸೋಮ್ಲಾ ಪವಾರ್ ಇವರಿಗೂ ಸಹ ಜಾನ್ ತಂದೆ ಭೀಮ್ ಶಾ ಇವರು 1982ರಲ್ಲಿ ಪ್ಲಾಟ್ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಜಾನ್ ತಂದೆ ಭೀಮ್ ಶಾ ಇವರು ಸರ್ವೆ ನಂಬರ್ 47/3ನಲ್ಲಿ ಯಾರ್ಯಾರಿಗೆ ಪ್ಲಾಟ್ ಗಳನ್ನು ಮಾರಾಟ ಮಾಡಿದ್ದಾರೆಂದು ನನಗೆ ಮಾಹಿತಿ ಇಲ್ಲ. ನೀವು ನಿಮ್ಮ ಪ್ರಮಾಣ ಪತ್ರದಲ್ಲಿ ಹೇಳಿದಂತೆ ವಾದಿಯು ಜಾನ್ ತಂದೆ ಭೀಮ್ ಶಾ ಇವರನ್ನು ತಪ್ಪಾಗಿ ತೋರಿಸಿ ವಾದಿಯು ಖರೀದಿ ಪತ್ರವನ್ನು ಮಾಡಿಕೊಟ್ಟಿದ್ದಾನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ವಾದಿ ರೈಲ್ವೇ ಇಲಾಖೆಯಲ್ಲಿ ಇದ್ದ ಕಾರಣ ಅವರಿಗೆ ಮೇಲಿಂದ ಮೇಲೆ ವರ್ಗಾವಣೆ ಆಗಿ ವಾಡಿಯಲ್ಲಿರುತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ 2016-17ರಲ್ಲಿ ಅವರ ಜಾಗದಲ್ಲಿ ನಾನು 2 ಕೋಣೆಗಳನ್ನು ಕಟ್ಟಿದ್ದೇನೆಂದು ಗೊತ್ತಾಯಿತು ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಿದಾಗ ನಾನು ಖರೀದಿ ಮಾಡಿದ ಆಸ್ತಿಯಲ್ಲಿ ನಾನು 4 ಕೋಣೆಗಳನ್ನು ಕಟ್ಟಿದ್ದೆ. ನಾನು 4 ಕೋಣೆಗಳನ್ನು ಕಟ್ಟಲು ಪರವಾನಿಗೆ ಪಡೆದಿರಲಿಲ್ಲ ಕೇವಲ 2 ಕೋಣೆಗಳನ್ನು ಕಟ್ಟಲು ಪರವಾನಿಗೆ ಪಡೆದಿದ್ದೆ. 3ನೇ ಪ್ರತಿವಾದಿ ಖರೀದಿ ಮಾಡಿದ್ದಾನೆ ಎನ್ನುವ ಜಾಗ ಈಗಲೂ ಖುಲ್ಲಾ ಜಾಗ ಎಂದರೆ ಸರಿ. ಪ್ರಕಾಶ್ ಇವರಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇರಲಿಲ್ಲ ನೀವು ಮತ್ತು ಪ್ರಕಾಶ್ ಇವರು ಸೇರಿ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ತಪ್ಪಾಗಿ ದಾಖಲೆಗಳನ್ನು ತಯಾರಿಸಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಯ ಮಾಲಿಕತ್ವದ ಜಾಗ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.